# 8

# ದೇವರ ಸ್ವರವನ್ನು ಅನುಸರಿಸುವದು

ರೋಮಾಪುರ 6:17ರಲ್ಲಿ ರೋಮಾಪುರದವರು, ತಮ್ಮ ಪಾಪದ ಜೀವಿತದಿಂದ, "ಅವರಿಗೆ ಕಲಿಸಿಕೊಟ್ಟ ಬೋಧನೆಗೆ ಅವರು ಮನಃ ಪೂರ್ವಕವಾಗಿ ಅಧೀನರಾಗಿದ್ದರಿಂದ," ಪೌಲನು ದೇವರಿಗೆ ಸ್ತೋತ್ರ ಮಾಡಿದನು. ರೋಮಾಪುರ 10:17ರಲ್ಲಿ, "ಕ್ರಿಸ್ತನ ವಾಕ್ಯವನ್ನು ಕೇಳುವದರಿಂದ ನಂಬಿಕೆಯು ಉಂಟಾಗುತ್ತದೆ" ಎಂದು ಬರೆಯಲಾಗಿದೆ. ಈ ಎರಡು ವಚನಗಳು ನಮ್ಮನ್ನು ಬೈಬಲಿನ ಪ್ರಮುಖವಾದ ತತ್ವಗಳಿಗೆ ನಡಿಸುತ್ತದೆ: ದೇವರ ಸ್ವರವನ್ನು ಆಲಿಸುವದರಿಂದ, ನಂಬಿಕೆಯಿಂದ ಜೀವಿಸುತ್ತೇವೆ, ಮತ್ತು ಆತನು ಹೇಳಿದಂತೆ ಜೀವಿಸುತ್ತೇವೆ. ದೇವರ ವಾಕ್ಯವು ಇರುವ ವಿಷಯಗಳಲ್ಲಿ ಹೇಗೆ ಕ್ರಿಸ್ತನನ್ನು ನಾವು ಅನುಸರಿಸೋಣ?

## ಗ್ರಂಥಗಳು ಮೌನವಾಗಿರುವ ವಿಷಯಗಳನ್ನು ಪರಿಶೀಲಿಸೋಣ

ನಾವು ಎದುರಿಸುವಂತ ಸಂಧಿಗ್ದ ಪರಿಸ್ಥಿತಿಗಳ ಅಥವಾ ಆಚಾರ ವಿಚಾರಗಳ ಕುರಿತಾಗಿ ಬೈಬಲನ್ನು ಏನನ್ನೂ ಹೇಳುವದಿಲ್ಲ. ಉದಾಹರಣೆಗಾಗಿ, ಕ್ರಿ.ಶ. ಮೊದಲನೆ ಶತಮಾನದಿಂದಿಚೆಗೆ ಉಂಟಾಗಿರುವ ತಾಂತ್ರಿಕತೆಯಲ್ಲಿ ಕ್ರೈಸ್ತರು ಯಾವ ರೀತಿಯಲ್ಲಿ ಜೀವಿಸಬೇಕು? ಮೋಟರ್ ಸೈಕಲ್ಲಿನ ಸುರಕ್ಷಿತ ಚಾಲನೆಯ ಕುರಿತಾಗಿ ಕ್ರೈಸ್ತರಲ್ಲಿರಬೇಕಾದ ಹೊಣೆಗಾರಿಕೆಯ ಕುರಿತಾಗಿಯೂ ಬೈಬಲಿನಲ್ಲಿ ನೇರವಾಗಿ ಏನನ್ನೂ ತಿಳಿಸುವದಿಲ್ಲ. ಈ ರೀತಿಯಾಗಿರುವದರಿಂದ ನಮಗೆ ಇಷ್ಟ ಬಂದ ಕಡೆಗೆ ಚಲಿಸಬಹುದೆಂಬ ಅರ್ಥವೇ? ಯಾವುದೇ ಬೈಬಲಿನ ವಿದ್ಯಾರ್ಥಿ ಇಂತ ಸಂಗತಿಯನ್ನು ಹೇಳುವದಿಲ್ಲ ಬೈಬಲ್ ನಮ್ಮ ಸ್ವಾಸ್ಥ್ಯವನ್ನು ಉಪಯೋಗಿಸುವ ಕುರಿತಾಗಿಯೂ ಮತ್ತು ನಮ್ಮ ಮೇಲೆ ಅಧಿಕಾರ ನಡೆಸುವ ಸರ್ಕಾರಕ್ಕೂ ಅಧೀನವಾಗಿರಬೇಕೆಂದು ಉಪದೇಶಿಸುತ್ತದೆ (ರೋಮಾಪುರ 13:1-7 ನೋಡಿ). ಈ ಎರಡು ತತ್ವಗಳು ವಾಹನದ ಚಾಲಕರಿಗೆ ಮಾರ್ಗದರ್ಶನವನ್ನು ನೀಡುತ್ತದೆ.

ಒಂದು ವಿಧದಲ್ಲಿ, ವಾಹನ ಚಾಲನೆ ಮಾಡುವ ಕುರಿತು ಬೈಬಲ್ ಏನನ್ನು ತಿಳಿಸುವದಿಲ್ಲ, ಮತ್ತು ವಾಹನಗಳ ಬಗ್ಗೆ ಬೈಬಲ್ ನೇರವಾಗಿ ಏನನ್ನು ತಿಳಿಸುವದಿಲ್ಲ. ಆದುದರಿಂದ ದೇವರು ವಾಹನ ಚಾನೆಯ ವರ್ತನೆಯ ಬಗ್ಗೆ ಮೌನವಾಗಿರುವನೆಂಬ ಅರ್ಥವೇ. ನಾವು ನಂಬಿಕೆಯಿಂದ ಜೀವಿಸಬೇಕಾದರೆ, ಒಂದು ವಿಷಯವನ್ನು ಸ್ಪಷ್ಟವಾಗಿ ತಿಳುಕೊಳ್ಳಬೇಕು, ಆದರೆ ನಾವು ಇದನ್ನು ತಿಳಿಯುವದಿಲ್ಲ, ಗ್ರಂಥಗಳ ಸ್ವಭಾವವೇನೆಂದರೆ: ದೇವರು ನಮಗೆ ಸಾಧಾರಣವಾದ ತತ್ವಗಳನ್ನು ವಾಕ್ಯದ ಮೂಲಕ ತಿಳಿಸುವದರಿಂದ, ಸಂದರ್ಭಕ್ಕನುಗುಣವಾಗಿ ನಾವು ಅದನ್ನು ಉಪಯೋಗಿಸಬೇಕು. ಇನ್ನೊಂದು ಮಾತಿನಲ್ಲಿ ಕೆಲವು ಉಪದೇಶಗಳನ್ನು ನಾವಾಗಿಯೇ ತಿಳಿದುಕೊಳ್ಳಬೇಕು.

ಈ ಉದಾಹರಣೆಯಿಂದ ನಾವು ಕಲಿತುಕೊಳ್ಳಬೇಕಾದ ವಿಷಯವೇನೆಂದರೆ ಬೈಬಲ್ ತಿಳಿಸದೆಯಿರುವ ಸಂಗತಿಗಳನ್ನು ತಿಳಿಯಲು ನಂಬಿಕೆಯಿಂದಲೇ ಮುಂದಾಗಬೇಕು. ಗ್ರಂಥಗಳು ಮೌನವಾಗಿರುವಂತ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ಉದ್ಭವಿಸುತ್ತವೆ. ಸಭೆಯಲ್ಲಿ ವಾದ್ಯಗಳ ಕುರಿತು ಪ್ರಶ್ನೆಗಳು ಉದ್ಭವಿಸುತ್ತವೆ. ಅದು ವ್ಯತ್ಯಾಸವುಳ್ಳ ಪರಿಸ್ಥಿತಿಯನ್ನು ತೋರಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ ತಾಂತ್ರಿಕವಾದಂತ ಸಂಗೀತ ವಾದ್ಯಗಳನ್ನು ಸಭೆಯ ಆರಾಧನೆಯಲ್ಲಿ ಉಪಯೋಗಿಸುವ ಕುರಿತು ಹೊಸ ಒಡಂಬಡಿಕೆಯು ನೇರವಾಗಿ ಏನನ್ನೂ ಆಜ್ಞಾಪಿಸದೇ ಅಥವಾ ಅದನ್ನು ನಿರಾಕರಿಸಿರುವದಿಲ್ಲ. ಈ ಮೌನವು ಅಂತಹ ವಾದ್ಯಗಳನ್ನು ಉಪಯೋಗಿಸುವದಕ್ಕೆ ಸ್ವತಂತ್ರವೇ? ಒಂದು ಗುಂಪು ಹೌದೆಂದು ಹೇಳುತ್ತದೆ.

ಇನ್ನೊಂದು ಗುಂಪು ಸಂಗೀತವಾದ್ಯಗಳ ಅಗತ್ಯತೆಯಿರುವದಿಲ್ಲವೆಂದು ಹೇಳುತ್ತದೆ. ನಾನು ಎರಡನೆಯ ಸಂಗತಿಯನ್ನು ಸರಿಯೆಂದು ನಂಬುತ್ತೇನೆ ಏಕೆ?

## ಗ್ರಂಥಗಳ ಮೌನವು ಅನುಮತಿಯಾಗಿದೆಯೆ?

ಕೆಲವು ಆಚರಣೆಗಳ ವಿಷಯದಲ್ಲಿ ಬೈಬಲ್ ಮೌನವಾಗಿರುವದಿಂದ ನಾವು ಮನಬಂದತೆ ಕಾರ್ಯಗಳನ್ನು ಮಾಡಬಹುದೆಂಬ ಆಲೋಚನೆಗಳು ಕೆಲವರದಾಗಿರುತ್ತದೆ. ಇದರ ಇನ್ನೊಂದು ಅರ್ಥವೇನೆಂದರೆ, ಬೈಬಲ್ ನೇರವಾಗಿ ತಿಳಿಸದೆ ಇರುವದನ್ನು ಮಾಡಬಹುದು ಎಂಬುದಾಗಿಯೇ. ಜ್ಯಾಕ್‌ಕಾಟ್ರೆಲ್‌ರವರು ಅದನ್ನು: "ದೇವರು ಯಾವುದಾದರು ... ವಿಷಯಗಳ ಬಗ್ಗೆ ನಿಯಮಗಳನ್ನು ನೀಡದೆ ಹೋಗಿದ್ದರೆ, ನಾವು ಅದನ್ನು ಇತರರು ಮಾಡಬಹುದು ಅಥವಾ ಮಾಡಬಾರದು ಎಂಬ ನಿಯಮಕ್ಕೆ ಒಳಪಡಿಸಬಾರದು."[1] ಇದನ್ನು ಸರಾಗವಾಗಿ ಅಭ್ಯಾಸಿಸಲು ಸಮಸ್ಯೆಯಾಗಿರುತ್ತದೆ:

ಇದರ ಕುರಿತಾದ ತರ್ಕದ ಅಸಂಬದ್ಧತೆಯನ್ನು ಓಲಾನ್ L. ಹಿಕ್ ಈ ರೀತಿ ವಿವರಿಸಿ ದ್ದಾರೆ:

> (ನಿಷೇದವಲ್ಲದ ನಿರ್ದಿಷ್ಟವಾದ ಸಂಗತಿಗಳ ಕುರಿತಾದ) ತತ್ವಗಳನ್ನು ನಿರ್ಣಯಿಸಿ ಅಂತಿಮ ಪಡಿಸುವಂಥ ಕಾರ್ಯವು ದೇವರ ಸೇವೆಯಲ್ಲಿ ಪ್ರವೇಶ ಹೊಂದುವುದಾದರೆ, ಪ್ರತಿ ಮನುಷ್ಯನು, ತನಗೆ ತಾನೆ ನಿಯಮಗಳನ್ನು ನೇಮಕ ಮಾಡಿಕೊಳ್ಳುವವನಾಗಿರುತ್ತಾನೆ. ಸಭೆಯಾಗಲಿ ಅಥವಾ ಸುವಾರ್ತೆಯಾಗಲಿ ಪರಿಶುದ್ಧವಾಗಿಯೇ ಮುಂದುವರಿಯಬೇಕಾಗಿದ್ದರೆ, ಇಂತಹ ತತ್ವಗಳನ್ನು ನಿಷಿದ್ಧಪಡಿಸಲಾಗಿದೆ.[2]

ಕೆಲವು ಸಾರಿ ಈ ತರ್ಕದ ಹೇಳಿಕೆಯನ್ನು ಕೇಳುತ್ತೇವೆ. "ಸಿದ್ಧಾಂತವನ್ನು ಅತಿಯಾಗಿ ಒತ್ತಿಹೇಳಿದರೆ, ಅದು ಸಿದ್ಧಾಂತವಾಗಿ ಉಳಿಯದು." ಮೇಲಿನ ವಿಷಯವು ಈ ಸಿದ್ಧಾಂತಕ್ಕೆ ಒಳಪಡುತ್ತದೆ. ದೇವರ ವಾಕ್ಯದಲ್ಲಿ ನಿಷಿದ್ಧವಾಗಿರದ ಅನೇಕ ವಿಷಯಗಳು ದೇವರ ಚಿತ್ತಕ್ಕೆ ಒಳಪಡುವದಿಲ್ಲ. ಉದಾಹರಣೆಗೆ, ಆರಾಧನೆಯಲ್ಲಿ ಭಾವೋದ್ವೇಗವಾಗಲು ಉದ್ದೀಪನ ಔಷಧಿಯನ್ನು ಉಪಯೋಗಿಸಬಹುದೇ? ಅದು ನಿಷಿದ್ಧ ಎಂದು ಬರೆದಿರುವದಿಲ್ಲ ಕರ್ತನ ಬೋಜನದಲ್ಲಿ ವಿಶೇಷಪಾನವನ್ನು ಮತ್ತು ಚಹವನ್ನು ಯೇಸುವಿನ ರಕ್ತದ ಸಂಕೇತವಾಗಿ ಬಳಸಬಾರದು ಎಂಬುದಾಗಿ ಇರುವದಿಲ್ಲ? ಇದರ ಬಗ್ಗೆ ಗ್ರಂಥಗಳು ಮೌನವಾಗಿರುವದರಿಂದ, ಅದನ್ನು ಅನುಮತಿ ಎಂದು ಪರಿಗಣಿಸಬಾರದು. ಈ ವಿಧವಾದ ತರ್ಕಗಳು ಇತರ ಚಟುವಟಿಕೆಗಳಿಗೆ ಎಡೆ ಮಾಡಿಕೊಡುವದರಿಂದ, ದೇವರ ಅಧಿಕಾರವನ್ನು ಗಂಭೀರ ವಾಗಿ ಪರಿಗಣಿಸುವವರು ಇದನ್ನು ಒಪ್ಪಿಕೊಳ್ಳುವದಿಲ್ಲ. ಈ ಅಂಶಗಳು, ದೇವರ ಆರಾ ಧನೆಯಲ್ಲಿ ಉಪಯೋಗಿಸತಕ್ಕ ವಾದ್ಯಗಳ ಕುರಿತಾಗಿ, ಬೈಬಲಿನಿಂದ ಮಾರ್ಗದರ್ಶನವನ್ನು ನೀಡುತ್ತದೆ.

"ಮೌನದ ಕುರಿತಾದ ವಾಗ್ವಾದದಲ್ಲಿ ಒಂದು ತರ್ಕವು ಒಳಗೊಂಡಿರುವದರಿಂದ," ಅದು, ಅದರಲ್ಲಿರುವ ಕಷ್ಟ ಮಾತ್ರವಾಗಿರುವದಿಲ್ಲ. ಅದು ದೇವರ ಸ್ವಭಾವಕ್ಕೂ ಮತ್ತು ಆತನು ಜನರೊಂದಿಗೆ ಬೆರೆತ ವಿಷಯಕ್ಕು ಹೊಂದಾಣಿಕೆಯಾಗುವದಿಲ್ಲ. ಈ ಪಾಠದ ನಿರ್ಣಯ ಕುರಿತಾಗಿ ಲಾಗಾರ್ಡ್‌ರವರು ಈ ಲೀತಿ ಬರೆದಿರುವರು:

> ಯಾವುದೇ ದಾಖಲೆಗಳು ಅಧಿಕಾರಯುಕ್ತವೆಂದು ತಿಳಿಯವಾಗ, ಅದರಲ್ಲಿರುವ ಮೌನಕ್ಕೆ ಗೌರವ ನೀಡಬೇಕು. ಇಲ್ಲದೆ ಹೋದರೆ ಆ ವಾಕ್ಯವನ್ನೂ ಅಧಿಕಾರವುಳ್ಳದ್ದು ಎಂದು ಏಕೆ ಒಪ್ಪಿಕೊಳ್ಳಬೇಕು? ಮೌನದ ಕುರಿತು ಅದರ ದಾಖಲೆಗಳು ಗೌರವಿಸಲ್ಪಡದಿದ್ದರೆ, ಅದು ಬೇರೆ ದಾಖಲೆಯಾಗುತ್ತದೆ. ಮನುಷ್ಯನೇ ನಿರ್ಮಿತ ಮಾಡಿದ ದಾಖಲೆಗಳಿಂದ, ಅದರ ಸ್ಥಳವನ್ನು "ಭರ್ತಿ ಮಾಡುತ್ತೇವೆ" ಅದು ನಿಜವಾಗಿಯೂ ಹೇಳ

ಲಾರದ ವಿಷಯವಾಗಿರುತ್ತದೆ. ಕೊನೆಯಲ್ಲಿ ಊರ್ಜಿತಗೊಂಡ ದಾಲೆಗಳು, ಮೂಲ ದಾಖಲೆಯಂತೆ ಕಾಣುವದಿಲ್ಲ - ಒಂದು ವೇಳೆ ಅದನ್ನು ತುಟಿಯಿಂದ ಒಪ್ಪಿಕೊಂಡರೂ ಸಹ.

ಆರಾಧನೆಯ ಕುರಿತಾಗಿ ಇಸ್ರಾಯೇಲ್ಯರಿಗೆ ಮೌನದಲ್ಲಿ ಅಡಕವಾಗಿರುವ ನಿಯಮಗಳನ್ನು ನೀಡಲಾಗಿತ್ತು. ಅಲ್ಲಿ ದೇವರು ಅವರಿಗೆ ಪ್ರಾಣಿಯಜ್ಞವನ್ನು ವಿಶೇಷ ಹಬ್ಬಗಳ ಮತ್ತು ದಶಮಾಂಶಗಳ ನಿಯಮಗಳನ್ನು ನೀಡಿದ್ದನು. ಉದಾಹರಣೆಗೆ, ಇದರ ಬದಲಾಗಿ ಬೇರೆಯಾವುದನ್ನು ಅಂಗೀಕರಿಸಬಾರದೆಂದು ಇಸ್ರಾಯೇಲ್ಯರು ತಿಳಿದಿದ್ದರು. ಬಿಸಿಯಾದ ಬೆಂಕಿ ಕೆಂಡದ ಮೇಲೆ ನಡೆದು ದೇವರ ಮಹಿಮೆಗೆ ಸೇರುವದು ಒಂದು ವೇಳೆ ದೀನತೆಯ ಕುರುಹು ಆಗಿರಬಹುದು, ಆದರೆ ಅದು ದೇವದರ್ಶನದ ಗುಡಾರದಲ್ಲಿನ ಆರಾಧನೆಯ ಪ್ರತಿಬಿಂಬವಾಗಿರಲಾರದು.

ಮೌನದ ಅಧಿಕಾರವನ್ನು ಕಾಪಾಡುವ ಯೋಚನೆಯನ್ನು ಕಂಡುಹಿಡಿದಿರುವುದಾದರೆ, ಅದು ತಪ್ಪಾಗುತ್ತದೆ. ಮೌನದ ಅಧಿಕಾರವು ಬೈಬಲ್‌ಗೆ ಅನುಗುಣವಾಗಿರುವದಿಲ್ಲ. ಮೋಶೆಯ ಧರ್ಮಶಾಸ್ತ್ರಕ್ಕೆ ಏನನ್ನು ಸೇರಿಸಬಾರದು ಮತ್ತು ಅದರಿಂದ ಏನನ್ನೂ ತೆಗೆಯಬಾರದು ಎಂದು ದೇವರು ಇಸ್ರಾಯೇಲ್ಯರಿಗೆ ತಿಳಿಸಿದ ಕುರಿತಾಗಿ ಏನು (ಧರ್ಮೋಪದೇಶಕಾಂಡ 12:32)? ಕೊರಿಂಥದವರ ಹೆಚ್ಚಳ ಮತ್ತು ವಿಭಜನೆಯ ಕುರಿತಾಗಿ ಇದೇ ಹೇಳಿಕೆಯನ್ನು ಪೌಲನು ತಿಳಿಸಿದ್ದಾನೆ. "ಶಾಸ್ತ್ರದಲ್ಲಿ ಹೇಳಿರುವದನ್ನು ಮೀರಿ ಹೋಗ ಬೇಡಿರಿ" (1 ಕೊರಿಂಥ 4:6).[3]

ಮೌನವಾಗಿರುವದು, ಅನುಮತಿ ಅಲ್ಲವೆಂದು ಬೈಬಲ್ ಉಪದೇಶವಾಗಿರುತ್ತದೆ. ಈ ಅಭಿಲಾಶೆಯು, ನಂಬಿಕೆಯಿಂದ ಜೀವಿಸಲು ಸಹಾಯಿಸಲಾರದು.

## ದೇವರ ಸ್ವರಕ್ಕೆ ಕಿವಿಗೊಡುವವರಾಗಿ

## ಶಾಸ್ತ್ರದಲ್ಲಿ ಹೇಳಿರುವದನ್ನು ಮೀರಬೇಡಿರಿ

ದೇವರ ಆರಾಧನೆಯಲ್ಲಿ, ನಾವು ಪಾಲಿಸುವ ಪ್ರತಿಯೊಂದು ಹಂತಕ್ಕೂ ದೇವರ ಸ್ವರದ ಅಧಿಕಾರವನ್ನು ಹೊಂದಿರಬೇಕು. ಈ ಅಧಿಕಾರವನ್ನು ನಾವು ಹೊಂದದೆ ಇದ್ದು, ದೇವರ ಮಾತಿಗೆ ಮೀರಿ ಹೋಗುವುದಾದರೆ, ನಮ್ಮ ಕ್ರಿಯೆಯು ಅನುಮಾನವುಳ್ಳದ್ದಾಗಿದೆ. ನಾವುಗಳು ಆತನ ನೀತಿ ನಿಯಮಗಳನ್ನು ಅರಿಯುವಂತೆ ಮತ್ತು ಆಚರಿಸುವಂತೆ ದೇವರು ತನ್ನ ಚಿತ್ತವನ್ನು ಪ್ರಕಟಿಸಿರುವನು, ಎಲ್ಲರು ಅದಕ್ಕೆ ಹೊಣೆಯಾಗಿ, ವಿಧೇಯತೆಯಿಂದ ಕಲಿತುಕೊಳ್ಳಬೇಕು. ದೇವರ ವಾಕ್ಯವು ಇದನ್ನು ಒತ್ತಿ ಹೇಳುವದರಿಂದ ಅದರ ವಿಧಿ ವಿಧಾನಗಳನ್ನು ನಾವು ನಂಬಬೇಕು. ಯಾಕಂದರೆ ಅದು "ದೇವರ ಬಾಯಿಂದ, ಹೊರಟ ಮಾತಾಗಿರುತ್ತದೆ."[4] ದೇವರ ವಾಕ್ಯವನ್ನು ಆಲಿಸಿ ಅದಕ್ಕೆ ವಿಧೇಯರಾಗಬೇಕೆಂಬುದು ಪ್ರಮುಖವಾದ ವಿಷಯಗಳಲ್ಲಿ ಒಂದಾಗಿರುತ್ತದೆ (ರೋಮಾಪುರ 6:17; ಯಾಕೋಬ 1:22).

ದೇವರು ಯಾವಾಗಲು ಈ ರೀತಿಯಾಗಿ ತನ್ನ ಜನರೊಂದಿಗೆ ವಹಿವಾಟನ್ನು ಮಾಡಿರುತ್ತಾನೆ. ಈ ದಿವಸಗಳ ಜನರು ದೇವರನ್ನು ಸನ್ಮಾನಿಸುವದರಲ್ಲಿ ಹಿನ್ನೆಡೆಯಲ್ಲಿ ಇರುವ ವಿಷಯದಲ್ಲಿ ಯೆಶಾಯನು ಮಾತನಾಡಿ, ಅವರು ಕೇಳಿದ ಸಂಗತಿಗಳನ್ನು ಅನುಸರಿಸ ಬೇಕೆಂದು ತಿಳಿಸಿ, "ನೀವು ಗ್ರಹಿಸಲಿಲ್ಲವೋ?" ಎಂದು ಹೇಳಿದನು (ಯೆಶಾಯ 40:28). ಯೆಶಾಯ 1 ನೇ ಅಧ್ಯಾಯದಲ್ಲಿ ಅವರು ದೇವರನ್ನು ಮರೆತು ಹೋದದ್ದರಿಂದ, ಆತನ ವಾಕ್ಯಗಳನ್ನು ಕೇಳಿ ತಿರುಗಿ ತಮ್ಮ ಪಾಪದ ಜೀವಿತವನ್ನು ಸರಿಪಡಿಸಿಕೊಳ್ಳಬೇಕೆಂದು ಎಚ್ಚರಿಸಿದನು (1:4, 10).

ಪ್ರವಾದಿಯಾದ ಯೋಶೆಯನು ಸಹ ಇದೇ ಮಾತನ್ನು ಹೇಳಿದನು. ಅವರು ಪಾಪ ಮಾಡಿದ್ದರಿಂದ, ಅವರ ಜನಾಂಗವೇ ನಾಶನದ ಹಾದಿಯಲ್ಲಿತ್ತು ಎಂದು ಎಚ್ಚರಿಸಿದನು. ಅವರು

ಅಂಥ ಒಂದು ಅಪಾಯದ ಸ್ಥಿತಿಗೆ ಏಕೆ ಇಳಿದು ಹೋದರು ಎಂದು ತಿಳಿಸಿದನು:

> ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ; ನೀವು ಜ್ಞಾನವನ್ನು ತಳ್ಳಿಬಿಟ್ಟದರಿಂದ ಇನ್ನು ನನಗೆ ಯಾಜಕಸೇವೆ ಮಾಡದಂತೆ ನಾನು ನಿಮ್ಮನ್ನು ತಳ್ಳಿಬಿಡುವೆನು; ನೀವು ನಿಮ್ಮ ದೇವರ ಧರ್ಮೋಪದೇಶವನ್ನು ಮರೆತ ಕಾರಣ ನಾನು ನಿಮ್ಮ ಸಂತತಿಯವರನ್ನು ಮರೆಯುವೆನು (ಹೋಶೇಯ 4:6).

ಇಸ್ರಾಯೇಲ್ಯರು ದೇವರ ಸ್ವರವನ್ನು ಕೇಳದೆ ಹೋದದ್ದರಿಂದ ನಾಶವಾದರು. ಬರೆಯಲ್ಪಟ್ಟ ವಾಕ್ಯವನ್ನು ಮೀರಿ ಹೋದರೆ ಅದರ ಪರಿಸ್ಥಿತಿ ಏನಾಗಿತ್ತು ಎಂದು ಪ್ರವಾದಿಯು ಅರಿತಿದ್ದನು, ಮತ್ತು ಅವರಿಗೆ ಎಚ್ಚರಿಸಿದನು.

ದೇವರು, ಕೆಲವು ವಿಷಯಗಳ ಕುರಿತಾಗಿ ಮೌನವಾಗಿರುವನು, ಎಂದು ತಿಳಿದು ನಮಗೆ ಯೋಗ್ಯವಾದದನ್ನು ನಾವು ಮಾಡಬಹುದು ಎಂಬುದಾಗಿ ಇರುವದಿಲ್ಲ. ಇಬ್ರಿಯ 7ನೇ ಅಧ್ಯಾಯದಲ್ಲಿ ಈ ಉಪದೇಶವನ್ನು ನೋಡುತ್ತೇವೆ. ನಂತರ ಬರಹಗಾರನು ಆ ವಾಕ್ಯವನ್ನು "ಎಚ್ಚರಿಕೆಯ ಮಾತು" ಎಂದು ಕರೆದನು (ಇಬ್ರಿಯ 13:22). ಯೇಸುವನ್ನು ಅನುಸರಿಸುವಲ್ಲಿ ದೃಢಚಿತ್ತರಾಗಿರಬೇಕೆಂದು ಬೇಡಿಕೊಂಡನು. ಆ ಎಚ್ಚರಿಕೆಯ ಮಾತಿನಲ್ಲಿ ಯೇಸು ಉತ್ತಮವಾದ ಮಧ್ಯಸ್ಥಗಾರನು ಎಂದು ತಿಳಿಸಿದನು. ಯಾಕಂದರೆ ಯೇಸು ಉನ್ನತವಾದ ಯಾಜಕನಾಗಿದ್ದದ್ದು, ಒಂದು ಕಾರಣವಾಗಿತ್ತು. ಅವನು ಮನುಷ್ಯರಿಗಾಗಿ ಮಾಡಿದ ಕಾರ್ಯಗಳೇ, ಅದಕ್ಕೆ ಸಾಕ್ಷಿಯಾಗಿತ್ತು. ಹೇಗೂ ಆತನು ಯಾಜಕತ್ವವು ಮೋಶೆಯ ಧರ್ಮಶಾಸ್ತ್ರದಂತೆ, ಆರೋನನ ಮೂಲಕವಾಗಿ ಆತನಿಗೆ ಅನುಗ್ರಹವಾಗಲಿಲ್ಲ, ಆದರೆ ಅದು ಮೇಲ್ಕಿಜೆದಕನ ತರಹದ ಯಾಜಕತ್ವವಾಗಿತ್ತು. ಆದಿಕಾಂಡ 14ರಲ್ಲಿ ಆತನ ಚರಿತ್ರೆಯನ್ನು ಸಂಕ್ಷೇಪ್ತವಾಗಿ ತೋರಿಸಲಾಗಿದೆ. ಇಬ್ರಿಯ ಬರಹಗಾರನು ಒತ್ತಿ ಹೇಳಿರುವಂತೆ, ಮೇಲ್ಕಿಜೆದೇಕನು ಅಬ್ರಾಮನನ್ನು ಆಶೀರ್ವದಿಸಿದನು. ಆತನು ಅಬ್ರಹಾಮನಿಗಿಂತಲೂ ಶ್ರೇಷ್ಟನು ಎಂದು ಇದು ಸೂಚಿಸುತ್ತದೆ. ಇಸ್ರಾಯೇಲ್ಯರ ತಂದೆಯಾದ ಲೇವಿಯು ಯಾಜಕ ಕುಲದವನಾಗಿದ್ದನು, ಅವನು ಸಹ, ಅಬ್ರಹಾಮನ ಸಂತಾನದವನಾಗಿದ್ದು, ಅವನು ಮೇಲ್ಕಿಜೆದಕನಿಗಿಂತ ಕೆಳಮಟ್ಟದಲ್ಲಿದ್ದನು. ಆದುದರಿಂದ ಯೇಸು ಕ್ರಿಸ್ತನು, ಮೇಲ್ಕಿಜೆದೇಕನ ತರಹದ ಯಾಜಕನಾಗಿದ್ದನು, ಅಂದರೆ ಯೇಸು ಕ್ರಿಸ್ತು, ಯಾಜಕತ್ವವು ಲೇವಿಯರ ಯಾಜಕತ್ವಕ್ಕಿಂತ ಶ್ರೇಷ್ಟವಾಗಿತ್ತು (ಇಬ್ರಿಯ 7:1-10).

ಹೇಗೂ, ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಯೇಸು ಯಾಜಕನಾಗಲಿಲ್ಲ, ಎಂದು ಬರಹಗಾರನು ತಿಳಿಸುತ್ತಾನೆ ಏಕೆ? ಯಾಕಂದರೆ ಅವನು ಬೇರೆ ವಿಧಧ ಕುಲದಿಂದ ಬಂದವನಾಗಿದ್ದನು. "ನಮ್ಮ ಕರ್ತನು ಯೆಹೂದ ಕುಲದಲ್ಲಿ ಜನಿಸಿದವನೆಂಬುದು ಪ್ರಸಿದ್ಧವಾಗಿದೆಯಷ್ಟೆ; *ಈ ಕುಲದ ವಿಷಯದಲ್ಲಿ ಮೋಶೆಯು ಯಾಜಕರ ಸಂಬಂಧವಾಗಿ ಒಂದು ಮಾತನ್ನಾದರೂ ಆಡಲಿಲ್ಲ*" (ಇಬ್ರಿಯ 7:14; ಒತ್ತಿ ಹೇಳಿದ್ದು ನನ್ನದು). ಈ ಯಾಜಕ ಕರ್ತವ್ಯಕ್ಕೆ ಬೇರೆ ಕುಲದಿಂದ ಆರಿಸಲಾಗಿದೆ ಎಂಬ ವಾಗ್ವದವಲ್ಲ. ಈಗಾಗಲೇ ಲೇವಿಯ ಕುಲದವರು ಯಾಜಕ ಸೇವೆಗೆ ಆಯ್ಕೆಗೊಂಡದ್ದರಿಂದ, ಯೂದಾ ಕುಲದವನ ಆಯ್ಕೆ ಅನಗತ್ಯವಾಗಿತ್ತು. ದೇವರೇ ಮಾತನಾಡಿದ್ದನು. ದೇವರ ವಾಕ್ಯಕ್ಕೆ ವಿರೋಧವಾಗಿ ಹೋಗುವುದು ನಿಯಮಬಾಹಿರವಾಗಿತ್ತು, ಮತ್ತು ಅದು ಪಾಪವಾಗಿತ್ತು. ಯೂದಾಕುಲದಿಂದ ಒಬ್ಬನೂ ಯಾಜಕನಾಗುವುದು ಅಸಾಧ್ಯವಾಗಿತ್ತು - ಅದು ನಿಷಿದ್ಧವಾಗಿತ್ತು ಎಂಬುದಾಗಿ ಇಲ್ಲ, ಆದರೆ ಅದು ಅಧಿಕೃತವಾಗಿರಲಿಲ್ಲ.

ಗ್ರಂಥಗಳ ಮೌನವು, ನಾವು ಇಷ್ಟಪಟ್ಟಂತ ರೀತಿಯಲ್ಲಿ ಮಾಡಲು ಅನುಮತಿಯಿಲ್ಲ, ನಿಯಮವನ್ನು ಬದಲಾಯಿಸುವ ಅಧಿಕಾರ ಅಲ್ಲಿರಲಿಲ್ಲ. ಪ್ರಾಣಿಗಳ ಯಜ್ಞಕ್ಕೆ, ವಿಶೇಷವಾದ ಹಬ್ಬಗಳಗೆ, ಮತ್ತು ದಶಮಾಂಶಗಳಿಗೆ ಈ ನಿಯಮವು ಒಳಪಟ್ಟಿತ್ತು. ಮೋಶೆಯ ನೇಮಕ

ಯಾಜಕತ್ವಕ್ಕು ಒಳಪಟ್ಟಿತ್ತು. ಆತನ ಸ್ವರಕ್ಕೆ ಅಧೀನರಾಗಬೇಕೆಂಬುದೇ ದೇವರ ಚಿತ್ತವಾಗಿರುವದರಿಂದ, ನಾವು ಆತನ ನಿಯಮಗಳನ್ನು ಮೀರಬಾರದು.

## ಮುಕ್ತಾಯ

ದೇವರ ಅಧಿಕಾರದ ಸ್ವರಕ್ಕೆ ಕಿವಿಗೊಡುವುದೇ ನಂಬಿಕೆಯ ಜೀವಿತವಾಗಿರುತ್ತದೆ. ಅದರ ಪರಿಮಿತಿಯಲ್ಲಿ ನಾವು ಜೀವಿಸಬೇಕೆಂದು ಆತನು ಆಶಿಸುತ್ತಾನೆ, ಮತ್ತು ಆತನ ಜರಹಕ್ಕೆ ಸೇರಿಸಲೂ ಬಾರದು ಮತ್ತು ತೆಗೆಯಲೂ ಬಾರದು. ಆತನ ಮಾತನ್ನು ಮೀರುವವರು ದೇವರನ್ನು ಮೆಚ್ಚಿಸಲಾರರು.

ಕೆಲವು ನಿರ್ದಿಷ್ಟ ಸಮಯದಲ್ಲಿ, ಕೆಲವು ಕ್ರಿಯೆಗಳನ್ನು ದೇವರು ನಿರಾಕರಿಸಿರುತ್ತಾನೆ, ನಾವು ಸರಿಯಾಗಿ ಜೀವಿಸಬೇಕೆಂಬುದೇ ಆತನ ಉಪದೇಶದ ಉದ್ದೇಶವಾಗಿದೆ. ಆತನ ತಿಳುವಳಿಕೆಯಲ್ಲಿ, ಉತ್ತಮವಾದದ್ದನ್ನು ತಿಳಿದಿರುವನು. ಆತನ ಪ್ರೀತಿಯಿಂದಲೇ ಅದನ್ನು ನಮಗೆ ಅನುಗ್ರಹಿಸುತ್ತಾನೆ ಆತನು ತಿಳಿಸುವ ಕೆಲವು ಕಾರ್ಯಗಳು, ನಮಗೆ ಅರ್ಥವಾಗದೆ ಇರಬಹುದು - ಆತನ ನಿಯಮಗಳನ್ನು ನೆರವೇರಿಸುವುದು ನಮಗೆ ಉತ್ತಮವೇ. ಇದನ್ನು ಮೀರುವವರು ಆತನನ್ನು ಮೆಚ್ಚಿಸಲಾರರು, ಆದರೆ ಏನನ್ನಾದ್ದರೂ ಸೇರಿಸುವದು ಅಥವಾ ತೆಗೆಯುವುದು ನಿಷಿದ್ಧವಾಗಿದೆ. ನಾವು ನಂಬಿಕೆಯಿಂದ ನಡೆಯಬೇಕಾಗಿದ್ದರೆ, ದೇವರ ಸ್ವರವನ್ನು ಕೇಳಬೇಕು. ಅದನ್ನು ಮಾಡಬೇಕೆ ವಿನ ಮೀರಬಾರದು.

---

ಟಿಪ್ಪಣಿಗಳು

[1]Jack W. Cottrell, "Restoration and the Word of God," *Christian Standard* 105 (15 November 1970): 1044; quoted in Jack P. Lewis, "New Testament Authority for Music in Worship," in *The Instrumental Music Issue,* ed. Bill Flatt (Nashville: Gospel Advocate Co., 1987), 53. [2]Olan L. Hicks, "Introduction," in Homer Hailey, *Attitudes and Consequences in the Restoration Movement,* 2d ed. (Rosemead, Calif.: Old Paths Book Club, 1952), 7. [3]F. LaGard Smith, *The Cultural Church* (Nashville: 20th Century Christian, 1992), 193. [4]1 ಅರಸು 21:17; ಯೆಶಾಯ 38:4; ಯರೆಮಿಯ 1:4, 11, 13; ಯೆಹೋಶುವ 6:1; 7:1; ಯೋನ 1:1; ಹಗ್ಗಾಯ 2:10; ಜೆಕರ್ಯ 1:1 ಹೆಚ್ಚಿನ ಸಾಕ್ಷಿಗಾಗಿ ಸೇರಿಸಲಾಗಿದೆ. ಎಜ್ರ ಮತ್ತು ನೆಹೆಮೀಯನ ಕಾಲದ ಪುನಃ ಸ್ಥಾಪನೆಯ ಕ್ರಿಯೆಗಳಲ್ಲಿ ಅಮೂಲ್ಯ ಪಾಠಗಳನ್ನು ಕಲಿಯಬಹುದು.